ಕನ್ನಡಪ್ರಭ
ಗುರುವಾರ 7.05.2026

ಹೆಚ್ಚಿನ ಸುದ್ದಿ ಪುಟ 09ರಲ್ಲಿ

ಗರಿಷ್ಠ 33°c | ಕನಿಷ್ಠ 23°c

ಸುದ್ದಿ ಸಿಂಚನ

ಕಣ್ಣಿನ ಆರೋಗ್ಯ ಕಾಳಜಿ ಮುಖ್ಯ: ಸ್ವಾಮೀಜಿ

ಹೊಸಕೋಟೆ: ಮನುಷ್ಯನ ದೇಹದ ಬಹುಮುಖ್ಯ ಅಂಗ ಕಣ್ಣಿನ ಬಗ್ಗೆ ಜಾಗ್ರತೆ ವಹಿಸಬೇಕು ಎಂದು ಆದಿಚುಂಚನ ಗಿರಿ ಚಿಕ್ಕಬಳ್ಳಾಪುರ ಶಾಖಾ ಮಠಾಧೀಶರಾದ ಮಂಗಳ ನಾಥ ಸ್ವಾಮೀಜಿ ತಿಳಿಸಿದರು. ರವೀಂದ್ರ ನೇತ್ರಾಲಯ ಕಣ್ಣಿನ ಆಸ್ಪತ್ರೆ ಹಮ್ಮಿಕೊಂಡಿದ್ದ ಉಚಿತ ನೇತ್ರ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ ಉದ್ಘಾಟಿಸಿಮಾತ ನಾಡಿದ ಅವರು, ಮನುಷ್ಯನ ದೇಹದ ಅತಿ ಮುಖ್ಯ ಅಂಗ ಕಣ್ಣಿನ ಬಗ್ಗೆ ಉದಾಸೀನ ಮಾಡಿದರೆ ಜೀವನದಲ್ಲಿ ಶಾಶ್ವತವಾಗಿ ಕತ್ತಲು ಉಂಟಾಗುತ್ತದೆ. ಆದ್ದರಿಂದ ಕಾಲಕಾಲಕ್ಕೆ ತಪಾಸಣೆ ಮತ್ತು ಸೂಕ್ತ ಚಿಕಿತ್ಸೆ ಪಡೆದುಕೊಂಡರೆ ಅಂಧತ್ವ ಅಥವಾ ಕಣ್ಣಿನ ಸಮಸ್ಯೆಗಳಿಂದ ದೂರವಿರಬಹುದು ಎಂದರು. ಈ ಸಂದರ್ಭದಲ್ಲಿ ನೇತ್ರ ತಜ್ಞರಾದ ಡಾ.ರಾಹುಲ್ ಗೌಡ, ಮಕ್ಕಳ ತಜ್ಞರಾದ ಡಾ.ಪ್ರೀತಿ, ವಕೀಲ ಎನ್.ಕೆ ರವೀಂದ್ರ, ಬಿಜೆಪಿ ರಾಜ್ಯ ಪರಿಷತ್ ಸದಸ್ಯೆ ಟಿ.ಎಸ್.ಸುಜಾತ, ವಕೀ ಲರ ಸಂಘದ ಮಾಜಿ ಅಧ್ಯಕ್ಷ ಎಂ.ವೆಂಕಟ ಸ್ವಾಮಿ, ಡಾ. ನಾಗರಾಜ್, ಮಹೇಶ್ ರವಿಶಂಕರ್, ಎನ್.ಕೆ ಲಕ್ಷ್ಮಣ್, ಚೇತನ ಪುರುಷೋತ್ತಮ್, ಕುಶಾರ್‌ಗೌಡ ಇದ್ದರು.

ಕನ್ನಡ ಭಾಷೆಯನ್ನು ಬೆಳೆಸಬೇಕು: ನಂಜೇಗೌಡ

ವಿಜಯಪುರ: ಪ್ರತಿಯೊಬ್ಬ ವಿದ್ಯಾರ್ಥಿಯೂ ಕನ್ನಡ ಭಾಷೆಯ ಕಂಪನ್ನು ಪಸರಿಸುವ ಕೆಲಸ ಮಾಡಬೇಕು ಎಂದು ತಾಲೂಕು ಕಸಾಪ ಅಧ್ಯಕ್ಷ ಆರ್.ಕೆ.ನಂಜೇಗೌಡ ತಿಳಿಸಿದರು. ಪಟ್ಟಣದ ಸಾಯಿ ಜ್ಞಾನ ಗಂಗಾ ಪದವಿ ಕಾಲೇಜಿನಲ್ಲಿ ಕಸಾಪ ಏರ್ಪಡಿಸಿದ್ದ 'ಕನ್ನಡ ಸಾಹಿತ್ಯ ಪರಿಷತ್ತಿನ 112ನೇ ಸಂಸ್ಥಾಪನಾ ದಿನಾಚರಣೆ' ಹಾಗೂ ನೂತನ ಪದಾಧಿಕಾರಿಗಳಿಗೆ ಪ್ರಮಾಣ ಪತ್ರ ವಿತರಣಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಪ್ರಾಂಶುಪಾಲರಾದ ಪ್ರದೀಪ್ ಮಾತನಾಡಿ, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಕಸಾಪ ಸದಸ್ಯತ್ವ ಪಡೆಯಬೇಕು ಎಂದರು. ಪದಾಧಿಕಾರಿಗಳು: ಎನ್.ಸಿ. ಮನೋ ವೆಂಕಟರಮಣ(ಸಂಘ-ಸಂಸ್ಥೆಗಳ ಪ್ರತಿನಿಧಿ), ಎಫ್. ಬಾಬಾಜಾನ್ (ಅಲ್ಪಸಂಖ್ಯಾತ ಘಟಕದ ಪ್ರತಿನಿಧಿ), ವಿ.ಗೋವಿಂದ ರಾಜು(ಗೌರವ ಕಾರ್ಯದರ್ಶಿ), ನರಸಿಂಹಮೂರ್ತಿ (ಪರಿಶಿಷ್ಟ ಜಾತಿ ಪ್ರತಿನಿಧಿ). ಇದೇ ವೇಳೆ ಪ್ರಗತಿಪರ ರೈತ ಧರ್ಮಪುರದ ಗೋವಿಂದಪ್ಪ, ಶಿಕ್ಷಕಿ ಸುಕನ್ಯಾ ಬೈರೇಗೌಡ ಹಾಗೂ ಪ್ರಾಂಶುಪಾಲ ಪ್ರದೀಪ್ ಅವರನ್ನು ಗೌರವಿಸಲಾಯಿತು. ಟೌನ್ ಕಸಾಪ ಅಧ್ಯಕ್ಷ ಕನಕರಾಜು, ಕಾರ್ಯದರ್ಶಿ ಪರಮೇಶಿ, ಉಪಾಧ್ಯಕ್ಷ ಜೆ.ಆರ್. ಮುನಿವೀರಣ್ಣ, ಉಪನ್ಯಾಸಕರಾದ ಹರ್ಷ, ನಾಗೇಶ್ ಶಿಕ್ಷಕಿ ಸುಕನ್ಯಾ ಇತರರು ಭಾಗವಹಿಸಿದ್ದರು.

ಬುದ್ಧ-ಬಸವ-ಅಂಬೇಡ್ಕರ್ ಚಿಂತನೆ ಇಂದು ಅನಿವಾರ್ಯ



ದಾಬಸ್‌ಪೇಟೆ: ಸಕಾರಾತ್ಮಕ ಬದಲಾವಣೆಗೆ ಬುದ್ಧ-ಬಸವ-ಅಂಬೇಡ್ಕರ್‌ಚಿಂತನೆಗಳು ಇಂದಿನ ಸಮಾಜಕ್ಕೆ ಅನಿವಾರ್ಯ ಎಂದು ದಲಿತ ಮುಖಂಡ ರುದ್ರೇಶ್ ಅಭಿಪ್ರಾಯಪಟ್ಟರು. ಸೋಂಪುರ ಹೋಬಳಿಯ ಶಿವಗಂಗೆಯಲ್ಲಿ ಹಮ್ಮಿಕೊಂಡಿದ್ದ ಸಂವಿಧಾನ ಶಿಲ್ಪಿ ಡಾ.ಅಂಬೇಡ್ಕರ್‌ಅವರ 135ನೇ ಜಯಂತಿಗೆ ಚಾಲನೆ ನೀಡಿ ಮಾತನಾಡಿದರು. ಪಿಯು ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು. ಗ್ರಾಪಂ ಮಾಜಿ ಅಧ್ಯಕ್ಷೆ ಚೇತನಾ ನಾಗೇಶ್, ದಲಿತ ಸೇನೆ ಉಪಾಧ್ಯಕ್ಷ ರವಿಕುಮಾರ್, ತಾಲೂಕು ಅಧ್ಯಕ್ಷರಾದ ಹನುಮಂತರಾಜು, ಮಂಜುನಾಥ್, ಮುಖಂಡರಾದ ಮರಿಯಪ್ಪ, ಹನುಮಂತರಾಜು ಮೊದಲಾದವರು ಉಪಸ್ಥಿತರಿದ್ದರು.



ಹೊಸಕೋಟೆಯಲ್ಲಿ ರವೀಂದ್ರ ನೇತ್ರಾಲಯ ಕಣ್ಣಿನ ಆಸ್ಪತ್ರೆ ಹಮ್ಮಿಕೊಂಡಿದ್ದ ಉಚಿತ ನೇತ್ರ ತಪಾಸಣೆ ಶಿಬಿರದಲ್ಲಿ ಆದಿಚುಂಚನಗಿರಿ ಚಿಕ್ಕಬಳ್ಳಾಪುರ ಶಾಖಾ ಮಠಾಧೀಶ ಮಂಗಳನಾಥ ಸ್ವಾಮೀಜಿ ಅವರನ್ನು ಗೌರವಿಸಲಾಯಿತು. ನೇತ್ರ ತಜ್ಞ ಡಾ.ರಾಹುಲ್ ಗೌಡ, ಮಕ್ಕಳ ತಜ್ಞ ಡಾ.ಪ್ರೀತಿ, ವಕೀಲ ಎನ್.ಕೆ ರವೀಂದ್ರ ಇದ್ದರು.



ವಿಜಯಪುರದ ಸಾಯಿ ಜ್ಞಾನ ಗಂಗಾ ಪದವಿ ಕಾಲೇಜಿನಲ್ಲಿ ಕಸಾಪ ಏರ್ಪಡಿಸಿದ್ದ ಕಸಾಪ 112ನೇ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದಲ್ಲಿ ತಾಲೂಕು ಕಸಾಪ ಅಧ್ಯಕ್ಷ ಆರ್.ಕೆ. ನಂಜೇಗೌಡ, ಪ್ರಗತಿಪರ ರೈತ ಧರ್ಮಪುರದ ಗೋವಿಂದಪ್ಪ, ಶಿಕ್ಷಕಿ ಸುಕನ್ಯಾ ಹಾಗೂ ಪ್ರಾಂಶುಪಾಲ ಪ್ರದೀಪ್‌ರನ್ನು ಗೌರವಿಸಲಾಯಿತು.



ದೈವರಾಧನೆಯಿಂದ ನೆಮ್ಮದಿ: ಸ್ವಾಮೀಜಿ

ಸೂಲಿಬೆಲೆ: ಇಂದಿನಜೀವನದಜಂಜಾಟದಲ್ಲಿನೆಮ್ಮದಿ ಕಾಣಲು ದೇವಾಲಯಗಳಿಂದ ಮಾತ್ರ ಸಾಧ್ಯ ಎಂದು ವಿಜಯಪುರ ಬಸವ ಕಲ್ಯಾಣ ಮಠದ ಮಹದೇವ ಸ್ವಾಮೀಜಿಹೇಳಿದರು.ಇಲ್ಲಿಯಪಂಚದೇವಾಲಯಗಳ ಆವರಣದಲ್ಲಿನಿರ್ಮಿಸಿರುವವೇಣುಗೋಪಾಲಸ್ವಾಮಿ, ಲಕ್ಷ್ಮೀನರಸಿಂಹಸ್ವಾಮಿಹಾಗೂನವಗ್ರಹದೇವಾಲಯದ ಪ್ರತಿಷ್ಠಾಪನಾ ಮಹೋತ್ಸವದಲ್ಲಿ ಮಾತನಾಡಿದರು. ನಾಗಲಪುರ ಸಂಸ್ಥಾನ ಮಠದ ಪಟ್ಟದ ತೇಜುಶಲಿಂಗ ಸ್ವಾಮೀಜಿ, ರಾಜ್ಯ ಒಕ್ಕಲಿಗಸಂಘದಮಾಜಿನಿರ್ದೇಶಕ ಬಿ.ಎನ್.ಗೋಪಾಲಗೌಡ,ದೇವಾಲಯಸಮಿತಿವ್ಯವಸ್ಥಾಪಕ ಸೂ.ಚಿ.ಬಸವರಾಜಪ್ಪ, ವಿಜಯಕುಮಾರ್, ವಿಶ್ವನಾಥ್, ಬಸವರಾಜು,ಪೋಸ್ಟ್‌ಸೀನಪ್ಪ, ಇದ್ದರು.

132 ಕೋಟಿ ರುಪಾಯಿ ಮೌಲ್ಯದ ರಾಗಿ ಖರೀದಿ

ಖರೀದಿ ಕೇಂದ್ರಕ್ಕೆ 2,71,982 ಕ್ವಿಂ. ರಾಗಿ ಸರಬರಾಜು | ಈ ವರ್ಷ 12,265 ರೈತರು 2,88,284 ಕ್ವಿಂ. ರಾಗಿ ಪೂರೈಕೆಗೆ ನೋಂದಣಿ

• **ಕನ್ನಡಪ್ರಭ ವಾರ್ತೆ** ರಾಮನಗರ

ಪ್ರಸಕ್ತ ಸಾಲಿನಲ್ಲಿ ಬೆಂಬಲ ಬೆಲೆ ಯೋಜನೆಯಡಿ ಜಿಲ್ಲೆಯ ರೈತರಿಂದ ಬರೋಬ್ಬರಿ 132 ಕೋಟಿ ರುಪಾಯಿ ಮೌಲ್ಯದ 2.71 ಲಕ್ಷ ಕ್ವಿಂಟಲ್ ರಾಗಿ ಖರೀದಿಸಲಾಗಿದೆ.



2025-26ನೇ ಸಾಲಿಗೆ ಹೋಲಿಸಿದರೆ ಈ ವರ್ಷ ಶೇಕಡ 20ರಷ್ಟು ರೈತರು ಹೆಚ್ಚುವರಿಯಾಗಿ ರಾಗಿ ಪೂರೈಕೆ ಮಾಡಿದ್ದಾರೆ. ಕಳೆದ ಬಾರಿ 18,082 ರೈತರು 2,74,804 ಕ್ವಿಂಟಲ್ ರಾಗಿ ಮಾರಾಟ ಮಾಡುವುದಾಗಿ ನೋಂದಣಿ ಮಾಡಿಕೊಂಡಿದ್ದರು. ಇದರಲ್ಲಿ 12,773 ರೈತರು 83 ಕೋಟಿ 57 ಲಕ್ಷ ರುಪಾಯಿ ಮೌಲ್ಯದ 1,94,804 ಕ್ವಿಂಟಲ್ ರಾಗಿ ಸರಬರಾಜು ಮಾಡಿದ್ದರು. ಆಹಾರ ಇಲಾಖೆ ಹಾಗೂ ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ ನಿಯಮಿತಕ್ಕೆ ಸರ್ಕಾರ ಇಂತಿಷ್ಟು ಕ್ವಿಂಟಲ್ ರಾಗಿಯನ್ನು ಕನಿಷ್ಠ ಬೆಂಬಲ ಬೆಲೆಯಡಿ ಖರೀದಿ ಮಾಡಲು ಗುರಿ ನೀಡಿತ್ತು. ಅದರಂತೆ

ಪ್ರಸಕ್ತ ಸಾಲಿನಲ್ಲಿ 12,265 ರೈತರು 2,88,284 ಕ್ವಿಂಟಲ್ ರಾಗಿ ಪೂರೈಸಲು ನೋಂದಣಿ ಮಾಡಿಕೊಂಡಿದ್ದರು. ಇದರಲ್ಲಿ 11,693 ರೈತರು 132 ಕೋಟಿ 89 ಲಕ್ಷ ರುಪಾಯಿ ಮೌಲ್ಯದ 2,71,982 ಕ್ವಿಂಟಲ್ ರಾಗಿಯನ್ನು ಸರಬರಾಜು ಮಾಡಿದ್ದಾರೆ. ಇದರಲ್ಲಿ ಶೇಕಡ 90ರಷ್ಟು ರಾಗಿ ಹಣವನ್ನು ರೈತರ ಖಾತೆಗೆ ಪಾವತಿ ಮಾಡಲಾಗಿದೆ.

ಜಿಲ್ಲೆಯಲ್ಲಿ ಸುಮಾರು 72,000 ಹೆಕ್ಟೇರ್‌ಗುರಿಯಲ್ಲಿ 65,000 ಹೆಕ್ಟೇರ್ ಪ್ರದೇಶದಲ್ಲಿ ರಾಗಿ ಬೆಳೆ ಇತ್ತು. ಈ ಬಾರಿ ನಿರೀಕ್ಷಿತ ಪ್ರಮಾಣದಷ್ಟು ರಾಗಿ ಉತ್ಪಾದನೆಯೂ ಆಗಿದೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ ಈ ವರ್ಷ ನಾಲ್ಕನೇ ಮೂರು ಭಾಗದಷ್ಟು ರಾಗಿಯೂ ಖರೀದಿಯಾಗುವ ಸಾಧ್ಯತೆಗಳಿವೆ.

ಕ್ವಿಂಟಲ್ ರಾಗಿಗೆ 4,886 ರು. ದರ ನಿಗದಿ : ಸರ್ಕಾರ ಕಳೆದ ವರ್ಷ ರಾಗಿಯ ದರವನ್ನು ಪ್ರತಿ ಕ್ವಿಂಟಲ್‌ಗೆ 4290 ರುಪಾಯಿ ನಿಗದಿ ಮಾಡಿತ್ತು. ಆದರೆ, ಈ ವರ್ಷ 596 ರುಪಾಯಿ ಹೆಚ್ಚುವರಿಯಾಗಿ ಅಂದರೆ 4,886 ರುಪಾಯಿ ದರ ನಿಗದಿ ಪಡಿಸಿತು. ಪ್ರತಿ ರೈತರಿಂದ ಒಂದು ಎಕರೆಗೆ 10 ಕ್ವಿಂಟಲ್ ನಂತೆ ಎಲ್ಲ ರೈತರಿಂದ ಅವರು ಹೊಂದಿರುವ ಜಮೀನಿಗೆ ಅನುಗುಣವಾಗಿ ರಾಗಿ ಖರೀದಿಸಲು ಉದ್ದೇಶಿಸಿತ್ತು. ರಾಗಿ ಖರೀದಿ ದರ ಹೆಚ್ಚಾಗಿರುವ ಜೊತೆಗೆ ಬೆಳೆ ಇಳುವರಿಯೂ ಚೆನ್ನಾಗಿರುವುದರಿಂದ ರೈತರ ಮುಖದಲ್ಲಿ ಮಂದಹಾಸ ಮೂಡಿಸಿದೆ.

ಕಳೆದ ಎರಡು ಮೂರು ವರ್ಷಗಳಿಂದ ಸತತವಾಗಿ ಏರಿಕೆ ಕಾಣುತ್ತಿದ್ದ ಬೆಲೆಯಲ್ಲಿ ಈ ಬಾರಿ ಪ್ರತಿ ಕೆಜಿಗೆ 5.96 ರು.ಗಳಷ್ಟು ಹೆಚ್ಚಳವಾಗಿತ್ತು. ಸಿರಿಧಾನ್ಯಗಳ ಬಗ್ಗೆ ಜಾಗೃತಿ ಹೆಚ್ಚಾದಂತೆ ರಾಗಿ ಬಳಕೆದಾರರು ಮತ್ತು ಬೆಳೆಗಾರರ ಸಂಖ್ಯೆಯಲ್ಲೂ ಗಣನೀಯ ಏರಿಕೆ ಕಂಡುಬಂದಿತ್ತು. ಈ ಹಿನ್ನೆಲೆಯಲ್ಲಿ ರೈತರಿಗೆ ಅನುಕೂಲ ಮಾಡಿಕೊಡಲು ಸರ್ಕಾರವು ಖರೀದಿ ನೋಂದಣಿ ಪ್ರಕ್ರಿಯೆಯನ್ನು ಶೀಘ್ರವಾಗಿ ಆರಂಭಿಸಿತ್ತು.

ಬ್ರೋಕರ್‌ಗಳಿಗೆ ಕಡಿವಾಣ: ಜಿಲ್ಲೆಯಲ್ಲಿ 5 ತಾಲೂಕುಗಳಿಗೆ ಒಂದರಂತೆ ಒಟ್ಟು 5 ಖರೀದಿ ಕೇಂದ್ರ ಮತ್ತು ಸಂಗ್ರಹಣ ಕೇಂದ್ರಗಳನ್ನು 2026ರ ಜನವರಿ ಅಂತ್ಯದೊಳಗೆ ತೆರೆಯಲಾಗಿತ್ತು. ಖರೀದಿ ಕೇಂದ್ರಗಳಲ್ಲಿ ರೈತರು ಮಾತ್ರ ಹಾಜರಿ ಕಡ್ಡಾಯ ಮಾಡಲಾಗಿತ್ತು. ಮಧ್ಯವರ್ತಿಗಳಿಗೆ ಕಡಿವಾಣ ಹಾಕಿದ್ದರಿಂದ ರಾಗಿ ಸರಬರಾಜು ಮಾಡಿದ ರೈತರಿಗೆ ನಿಗದಿತ ದಿನಾಂಕದೊಳಗೆ ಹಣ ಪಾವತಿಯಾಗಿದೆ.

ಮೇ 5ರವರೆಗೆ ಮಾರಾಟದ ನೋಂದಣಿ

ಖರೀದಿ ಕೇಂದ್ರ	ನೋಂದಣಿ	ರಾಗಿ ಪ್ರಮಾಣ (ಕ್ವಿ)
ಕನಕಪುರ	3,325	94,353.00
ಮಾಗಡಿ	5,102	1,09,338.50
ರಾಮನಗರ	472	11,029.50
ಮಾಗಡಿ-1	2,056	40,879.50
ಚನ್ನಪಟ್ಟಣ	373	10,248.50
ಹಾರೋಹಳ್ಳಿ	937	22,435.00
ಒಟ್ಟು	12,265	2,88,284.00

ಮೇ 5ರವರೆಗೆ ರಾಗಿ ಸರಬರಾಜಿನ ವಿವರ

ಖರೀದಿ ಕೇಂದ್ರ	ರಾಗಿ ಪೂರೈಸಿದ ರೈತರು	ರಾಗಿ ಪ್ರಮಾಣ (ಕ್ವಿ)	ರಾಗಿ ಒಟ್ಟು ಮೌಲ್ಯ (ರು.)
ಕನಕಪುರ	3,104	86,779.00	42,40,02,194
ಮಾಗಡಿ	4,907	1,04,616.50	51,11,56,219
ರಾಮನಗರ	452	10,478.50	5,11,97,951
ಮಾಗಡಿ-1	1,966	38,881.50	18,99,75,009
ಚನ್ನಪಟ್ಟಣ	357	9,727.00	4,75,26,122
ಹಾರೋಹಳ್ಳಿ	907	21,500.00	10,50,49,000
ಒಟ್ಟು	11,693	2,71,982.50	132,89,06,495

ವೀರ ಯೋಧರ ತ್ಯಾಗ, ಬಲಿದಾನಕ್ಕೆ ಬೆಲೆ ಕಟ್ಟಲಾಗದು

ಮೃತಯೋಧ ಯಶವಂತ್, ಮಹದೇವ್ ಕುಟುಂಬಕ್ಕೆ ಆರ್ಥಿಕ ನೆರವು: ಡಾ. ಜಯರಾಜ್

• **ಕನ್ನಡಪ್ರಭವಾರ್ತೆ** ಹೊಸಕೋಟೆ

ದೇಶ ಸೇವೆ ಮಾಡುವ ಭಾರತೀಯ ಯೋಧರ ತ್ಯಾಗ ಹಾಗೂ ಬಲಿದಾನಕ್ಕೆ ನಾವು ಎಂದಿಗೂ ಬೆಲೆ ಕಟ್ಟಲು ಸಾಧ್ಯವಿಲ್ಲ. ಅವರ ಕುಟುಂಬಕ್ಕೆ ಗೌರವ ಸಮರ್ಪಣೆ ನಮ್ಮ ಕರ್ತವ್ಯ ಎಂದು ವಹ್ನಿಕುಲ ತಿಗಳ ಸಂಘದ ಮಾಜಿ ರಾಜ್ಯಾಧ್ಯಕ್ಷ ಡಾ.ಸಿ.ಜಯರಾಜ್ ತಿಳಿಸಿದರು.

ನಗರದ ಖಾಸಗಿ ಸಭಾಭವನದಲ್ಲಿ ಹುಟ್ಟುಹಬ್ಬದ ಅಂಗವಾಗಿ1999ರಕಾರ್ಗಿಲ್‌ಯುದ್ಧದಲ್ಲಿಮಡಿದವೀರ ಯೋಧ ಯಶವಂತ್ ದುರ್ಗಪ್ಪ ಕೊಲ್ಕಾರ್‌ಹಾಗೂ ಸೇನೆಯಲ್ಲಿದ್ದು ಅಪಘಾತದಲ್ಲಿ ಮೃತಪಟ್ಟ ಮಹದೇವ್ ಈಶ್ವರ್‌ಯರಗಟ್ಟಿ ಕುಟುಂಬಕ್ಕೆ ತಲಾ 1 ಲಕ್ಷ ಆರ್ಥಿಕ ನೆರವು ನೀಡಿ ಗೌರವಿಸಿ ಮಾತನಾಡಿದರು.

ತಂದೆ-ತಾಯಿಕುಟುಂಬದಸದಸ್ಯರನ್ನುಬಿಟ್ಟುದೇಶದ ಗಡಿ ಕಾಯುವ ಪ್ರತಿಯೊಬ್ಬ ಯೋಧ ಕೂಡ ನಮಗೆ ದೇವರಸಮಾನ.ದೇಶದಅಸಂಖ್ಯಾತತಂದೆ-ತಾಯಿಗಳು ಮಕ್ಕಳನ್ನು ದೇಶ ಸೇವೆಗೆ ಕಳುಹಿಸಿ ಕಳೆದುಕೊಂಡಿದ್ದಾರೆ. ಸಮಾಜದಲ್ಲಿ ಸ್ಥಿತಿವಂತರು ದುಂದುವೆಚ್ಚ ಮಾಡುವ ಬದಲು ಮೃತ ಯೋಧರ ಕುಟುಂಬಕ್ಕೆ ಆರ್ಥಿಕ ನೆರವು ನೀಡಿ ಸಮಾಜಕ್ಕೆ ಮಾದರಿಯಾಗಬೇಕು ಎಂದರು.



ಹೂಡಿ ವಿಜಯ್ ಕುಮಾರ್‌ಮಾತನಾಡಿ, ಗಾಳಿ ಮಳೆ ಲೆಕ್ಕಿಸದೆ ದೇಶ ಭಕ್ತಿಯನ್ನೆ ಉಸಿರಾಗಿಸಿಕೊಂಡು ಎದುರಾಳಿಗಳ ವಿರುದ್ಧ ಹೋರಾಡಿ ಇತಿಹಾಸ ಸೃಷ್ಟಿಸುವ ವೀರ ಯೋಧರ ಕುಟುಂಬಗಳಿಗೆ ಆತ್ಮಸ್ಥೈರ್ಯ ತುಂಬಬೇಕು. ಡಾ.ಜಯರಾಜ್ ಕಾರ್ಯ ಇತರರಿಗೆ ಪ್ರೇರಣೆಎಂದರು.

ಈ ವೇಳೆ ಜಯರಾಜ್ ಪತ್ನಿ ಲಕ್ಷ್ಮೀ, ಪುತ್ರ ಸಚಿನ್, ಟೌನ್‌ಕಾಂಗ್ರೆಸ್‌ಅಧ್ಯಕ್ಷಬಿವಿ.ಬೈರೇಗೌಡ, ಯೋಜನಾ ಪ್ರಾಧಿಕಾರದ ನಿರ್ದೇಶಕ ಡಾ ಎಚ್.ಎಂ.ಸುಬ್ಬರಾಜ್, ಉದ್ಯಮಿಸುಬಾಷ್‌ಗೌಡ, ಯುವಬ್ರಿಗೇಡ್‌ಸಂಚಾಲಕ ಆನಂದ್ ಮರಿಗೌಡ ಮತ್ತಿತರರು ಹಾಜರಿದ್ದರು.

ಗೊಲ್ಲಹಳ್ಳಿ-ದೊಡ್ಡಬಳ್ಳಾಪುರ ರಸ್ತೆ ಡಾಂಬರೀಕರಣಕ್ಕೆ ಚಾಲನೆ

ಘಟಾನುಘಟಿ ನಾಯಕರಿದ್ದರೂ ಮಾಡಲಿಲ್ಲವೇಕೆ?

• **ಕನ್ನಡಪ್ರಭ ವಾರ್ತೆ** ದಾಬಸ್‌ಪೇಟೆ

ದಶಕಗಳಿಂದನೆನೆಗುದಿಗೆಬಿದ್ದಿದ್ದಗೊಲ್ಲಹಳ್ಳಿ-ದೊಡ್ಡಬಳ್ಳಾಪುರ ರಸ್ತೆ ಡಾಂಬರೀಕರಣ ಕಾಮಗಾರಿಗೆ ಚಾಲನೆ ನೀಡಿದ್ದೇನೆ ಎಂದು ಶಾಸಕ ಎನ್.ಶ್ರೀನಿವಾಸ್ ತಿಳಿಸಿದರು.

2016ರಲ್ಲಿ ಲೋಕೋಪಯೋಗಿ ಸಚಿವರಾಗಿದ್ದ ಮಹಾದೇವಪ್ಪ ಅವಧಿಯಲ್ಲಿ ಈ ರಸ್ತೆ ಕಾಮಗಾರಿ ಪ್ರಾರಂಭವಾಗಿದ್ದು, 2018ರವರೆಗೆ ಕಾಮಗಾರಿ ವೇಗವಾಗಿ ನಡೆಯಿತು.ನಂತರಬಂದಕುಮಾರಸ್ವಾಮಿ, ಯಡಿಯೂರಪ್ಪ,ಬಸವರಾಜಬೊಮ್ಮಾಯಿ ಮುಖ್ಯಮಂತ್ರಿಗಳಿದ್ದು, ಮೈತ್ರಿ ಸರ್ಕಾರದ ಶಾಸಕರಿದ್ದರೂ ಕಾಮಗಾರಿ ನಡೆಯದೇ ಸ್ಥಗಿತಗೊಂಡಿತ್ತು. ಮತ್ತೆ ಸಿದ್ದರಾಮಯ್ಯ ಮುಖ್ಯಮಂತ್ರಿ ಆದ ಬಂದ ನಂತರವೇ ಈ ಕಾಮಗಾರಿಗೆ ವೇಗ ದೊರೆತಿದೆ ಎಂದರು.

ರಸ್ತೆ ಸಮಸ್ಯೆಯನ್ನು ಸರಿಪಡಿಸಲಿಲ್ಲ ಎಂದುನನ್ನಬಗ್ಗೆಸಾಮಾಜಿಕಜಾಲತಾಣದಲ್ಲಿ ತಪ್ಪಾಗಿ ಅರ್ಥೈಸಲಾಗುತ್ತಿತ್ತು. ಬಿಜೆಪಿ ಸರ್ಕಾರದವಿದ್ದಾಗ, ಜೆಡಿಎಸ್ ಸರ್ಕಾರ ಅಧಿಕಾರದಲ್ಲಿದ್ದಾಗ ಜನರ ಬಗ್ಗೆ ಕಾಳಜಿ ಇರಲಿಲ್ವಾ, ಬಿಜೆಪಿ-ಜೆಡಿಎಸ್ ಘಟಾನುಘಟಿ ನಾಯಕರಿದ್ದರೂ ಯಾಕೆ ಮಾಡಿಸಲಿಲ್ಲ, ದೊಡ್ಡ ದೊಡ್ಡ ಹುದ್ದೆಗಳನ್ನು ಅನುಭವಿಸುವಾಗ ಈ ಕಾಮಗಾರಿ ನೆನೆಪಿಗೆ ಬರಲಿಲ್ಲವಾ, ಸರ್ಕಾರದ ಮೇಲೆ ಒತ್ತಡ ತಂದು ಕೆಲಸ ಮಾಡಬೇಕಿತ್ತು ಎಂದು ವಿರೋಧ ಪಕ್ಷಗಳ ವಿರುದ್ಧ ಶಾಸಕರು ಹರಿಹಾಯ್ದರು. 1500 ಕೋಟಿ ಅನುದಾನ, ಒಳಚರಂಡಿ ಅನುದಾನ, ಕಾವೇರಿ ನೀರಿ ಹರಿಸಲು ಯೋಜನೆಗೆ ಚಾಲನೆ ನೀಡಿಸಿದ್ದಾನೆ.



ಈ ವೇಳೆ ಎನ್‌ಪಿಎ ಅಧ್ಯಕ್ಷ ಎಂ.ಕೆ. ನಾಗ ರಾಜು, ನಗರಸಭೆ ಅಧ್ಯಕ್ಷ ಗಣೇಶ್, ಟಿಎಪಿಸಿಎಂಎಸ್ ಮಾಜಿ ಅಧ್ಯಕ್ಷ ನರಸಿಂಹ ಮೂರ್ತಿ, ವಕೀಲ ಮುರಳಿ, ಮುಖಂಡ ಸೋಮಶೇಖರ್ ಇತರರಿದ್ದರು.

ಕನಕಪುರ ಶಿಕ್ಷಕರ ಸಂಘ: ರಮೇಶ್ ನೇತೃತ್ವದ ತಂಡಕ್ಕೆ ಜಯ

ಕನಕಪುರ: ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾಶಿಕ್ಷಕರಸಂಘದಕನಕಪುರತಾಲೂಕು ಶಾಖೆಯ 2026 - 2031ರ ಅವಧಿಗೆ ನಡೆದ ಶಿಕ್ಷಕರ ಸಂಘದ ಚುನಾವಣೆಯಲ್ಲಿ ಹಾಲಿ ಜಿಲ್ಲಾಧ್ಯಕ್ಷ ರಮೇಶ್ ನೇತೃತ್ವದ ತಂಡದ ಎಚ್.ವಿ. ಚಂದ್ರಶೇಖರಮತ್ತು ವೈ.ಸಿ.ನಟರಾಜ್ ತಂಡ ಸತತ 4ನೇ ಬಾರಿ ಗೆಲುವು ಸಾಧಿಸಿದ್ದಾರೆ. ಶಿಕ್ಷಕರ ಸಂಘದ ಚುನಾವಣೆಯಲ್ಲಿ 11 ಸ್ಥಾನಗಳಿಗೆ ತಂಡದ 7 ಸಾಮಾನ್ಯ ಅಭ್ಯರ್ಥಿಗಳ ಕ್ಷೇತ್ರದಲ್ಲಿ ಶಿಕ್ಷಕ ಚಂದ್ರ ಶೇಖರ್, ನಟರಾಜ್, ರಮೇಶ್. ಅಶೋಕ್, ಗಂಗಸ್ವಾಮಿ, ಐವರು ಶಿಕ್ಷಕರು ಹಾಗೂ ಶಿಕ್ಷಕಿಯರ 4 ಮೀಸಲಾತಿ ಸ್ಥಾನದಲ್ಲಿ, ಜಿ.ಎಸ್.ಗೀತಾ, ಜಿ.ಡಿ.ಚಂದ್ರಾವತಿ, ಟಿ.ಎಸ್.ಮಮತ, ಎಂ. ಗಾಯತ್ರಿ ಜಯಗಳಿಸಿದ್ದು ಒಟ್ಟು 11 ಸ್ಥಾನಗಳಲ್ಲಿ 9 ಸ್ಥಾನಗಳು ತಂಡದ ಪಾಲಾಗಿದೆ. ತಮ್ಮ ತಂಡ ಪ್ರಸ್ತುತ 4ನೇ ಬಾರಿ ಹ್ಯಾಟ್ರಿಕ್ ಬಾರಿಸಿ, 4ನೇ ಬಾರಿಗೆ ಅಧಿಕಾರದ ಗದ್ದುಗೆ ಹಿಡಿದು ಸೇವೆ ಮಾಡಲು ಅವಕಾಶ ಮಾಡಿಕೊಟ್ಟ ತಾಲೂಕಿನ ಎಲ್ಲಾ ಶಿಕ್ಷಕರಿಗೆ, ಜಿಲ್ಲಾ ಶಿಕ್ಷಕರ ಸಂಘದ ಉಪಾಧ್ಯಕ್ಷ ಶಿವಲಿಂಗಯ್ಯ ಮತ್ತು ತಾಲೂಕು ಶಿಕ್ಷಕರ ಸಂಘದ ಅಧ್ಯಕ್ಷರ ಪ್ರಭಾಕರ್‌ಅಭಿನಂದನೆ ತಿಳಿಸಿದ್ದಾರೆ.



ವಿಜೇತ ಅಭ್ಯರ್ಥಿಗಳಿಗೆ ಅಭಿನಂದನೆ ಸಲ್ಲಿಸಿದ ಶಿಕ್ಷಕರು.

ಮಾಗಡಿಯಲ್ಲಿ ಜನಪದ ಗಾಯಕ ಡಾ.ಜೋಗಿಲ ಸಿದ್ದರಾಜುಗೆ ಸನ್ಮಾನ

ಡಾ.ಗಂಗೂಬಾಯಿ ಹಾನಗಲ್ ವಿವಿಯಿಂದ ಡಿಲಿಟ್



ಮಾಗಡಿ: ಮಾಗಡಿ ನೆಲದಲ್ಲಿ ಮೂಲಜನಪದ ಕಲಾವಿದರಿದ್ದು, ದೇಶವಿದೇಶ ಸುತ್ತಿ ಜನಪದ ಸಂಗೀತ, ಸಾಹಿತ್ಯ, ಪ್ರದರ್ಶನ ಕಲೆಗಳನ್ನು ಪ್ರದರ್ಶಿಸಿ ಮೂಲ ಪರಂಪರೆ ಉಳಿಸಲು ಶ್ರಮಿಸುತ್ತಿರುವ ಜೋಗಿಲ ಸಿದ್ದರಾಜು ಅವರು ಮಂಡಿಸಿದ್ದ ಪ್ರಬಂಧಕ್ಕೆ ಪಿಎಚ್.ಡಿ ಲಭಿಸಿರುವುದು ಸಂತಸ ತಂದಿದೆ ಹಿರಿಯ ವಕೀಲ ಪ್ರಕಾಶ್ ಹೇಳಿದರು.

ತಾಲೂಕಿನ ಸಾವನದುರ್ಗ ಜಂಗಲ್ ರೆಸಾರ್ಟ್‌ನಲ್ಲಿ ಬೆಂಗಳೂರಿನ ನಾಗರಬಾವಿ ಕ್ಲಬ್ ಮತ್ತು ಮಾಗಡಿ ಕ್ಲಬ್ ಸಂಸ್ಥಾಪಕ ಹಾಗೂ ಹಿರಿಯ ವಕೀಲ ಪ್ರಕಾಶ್, ಸಂಸ್ಕೃತಿ ಚಿಂತಕ ಮಲ್ಲಿಗೆ ಜಗದೀಶ್ ನೇತೃತ್ವದಲ್ಲಿ ಅಂತಾರಾಷ್ಟ್ರೀಯ ಮಟ್ಟದ ಜಾನಪದ ಗಾಯಕ ಡಾ. ಜೋಗಿಲ ಸಿದ್ದರಾಜು ಮಂಡಿಸಿದ್ದ ಜನಪ್ರಿಯ ಜನಪದ ಗೀತೆಗಳು ಪರಂಪರೆ ಮತ್ತು ಪ್ರಯೋಗ ಎಂಬ ಪ್ರಬಂಧಕ್ಕೆ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿವಿ ಡಿ.ಲಿಟ್ ಪದವಿಗೆ ಭಾಜನರಾಗಿರುವ ಹಿನ್ನೆಲೆಯಲ್ಲಿ ಅವರನ್ನು ಅಭಿನಂದಿಸಿ ಮಾತನಾಡಿದರು.

ಜಾನಪದ ಗಾಯಕ ಡಾ.ಜೋಗಿಲ ಸಿದ್ದರಾಜು ಮಾತನಾಡಿ, ನಮ್ಮ ಅಮ್ಮ ಹಾಡುತ್ತಿದ್ದ ಜೋಗುಳ ಪದಗಳನ್ನು ಕೇಳಿಸಿಕೊಂಡು ಬೆಳೆದವನು ನಾನು. ಜನಪದ ದೈವಗಳ ಕಥನ ಕಾವ್ಯ, ಸೋಬಾನೆ ಪದ, ದೇವರ ಪದ, ಮಂಟೇಸ್ವಾಮಿ, ಮಲೆಮಹದೇಶ್ವರ ಪದಗಳನ್ನು ಮೂಲ ಜನಪದದಲ್ಲಿ ಹಾಡುತ್ತಾ 18 ದೇಶ ಸುತ್ತಿ ಬಂದಿದ್ದೇನೆ. ಕೆಂಪೇಗೌಡರ ಮಾಗಡಿ ಸೀಮೆಯಲ್ಲಿ ಗೆಳೆಯರು ಅಭಿನಂದಿಸಿದ್ದು ತುಂಬಾ ಸಂತೋಷ ಎಂದರು.

ಕಜಾಪ ತಾಲೂಕು ಘಟಕದ ಅಧ್ಯಕ್ಷ ದೊಡ್ಡಬಾಣಗೆರೆ ಮಾರಣ್ಣ, ಮಲ್ಲಿಗೆ ಜಗದೀಶ್, ಬಿಡಿಎ ಚಿಕ್ಕಣ್ಣ, ಆನಂದ್, ಪ್ರಕಾಶ್, ಹರೀಶ್, ಶರವಣ, ಲೋಕೇಶ್, ವಕೀಲ ಚಂದ್ರಶೇಖರ್, ಯತೀಶ್, ವೆಂಕಟೇಶ್, ಅಂಜನಮೂರ್ತಿ, ಶಂಕರೇಗೌಡ ಇತರರಿದ್ದರು.

ನಕಲಿ ದಾಖಲೆ ಸೃಷ್ಟಿ | ಭೂಮಿ ಲಪಟಾಯಿಸಲು ಕಂದಾಯ ಮತ್ತು ಪೊಲೀಸ್ ಇಲಾಖೆ ಅಧಿಕಾರಿಗಳು ಶಾಮೀಲು

ಪಿತ್ರಾರ್ಜಿತ ಜಮೀನು ಉಳಿಸಿಕೊಡಲು ಕುಟುಂಬ ಮನವಿ

• **ಕನ್ನಡಪ್ರಭ ವಾರ್ತೆ** ರಾಮನಗರ

ಪಿತ್ರಾರ್ಜಿತವಾಗಿ ಬಂದಿರುವ ಜಮೀನನ್ನು ಕಂದಾಯ ಇಲಾಖೆ ಅಧಿಕಾರಿಗಳೇ ಖಾಸಗಿ ವ್ಯಕ್ತಿಗಳೊಂದಿಗೆ ಶಾಮೀಲಾಗಿ ನಕಲಿ ದಾಖಲೆಗಳನ್ನು ಸೃಷ್ಟಿಸಿ ಪರಭಾರೆ ಮಾಡಲು ಹೊರಟಿದ್ದಾರೆ. ತಪ್ಪಿತಸ್ಥರ ವಿರುದ್ಧ ಸೂಕ್ತ ಕ್ರಮ ಜರುಗಿಸಿ ನಮ್ಮ ಭೂಮಿ ಹಕ್ಕು ಕಲ್ಪಿಸಿಕೊಡಬೇಕು ಎಂದು ಒತ್ತಾಯಿಸಿ ನೊಂದ ರೈತ ಕುಟುಂಬದವರು ಬುಧವಾರ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.



ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದ ನೊಂದ ರೈತ ಕುಟುಂಬ.

ನಗರದ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಜಿಲ್ಲಾಧಿಕಾರಿ ಯಶವಂತ್ ವಿ.ಗುರುಕರ್‌ಅವರಿಗೆಮನವಿಸಲ್ಲಿಸಿದಬಳಿಕಸುದ್ದಿಗಾರರೊಂದಿಗೆ ಮಾತನಾಡಿದ ರೈತ ಕುಟುಂಬದ ಸುರೇಂದ್ರ, ರಾಮನಗರ ತಾಲೂಕು ಕಸಬಾ ಹೋಬಳಿ ಗ್ರಾಮ ಲೆಕ್ಕಾಧಿಕಾರಿ ಅಜಯ್ ಕುಮಾರ್, ರಾಜಸ್ವನಿರೀಕ್ಷಕನಾಗರಾಜು,ಸರ್ವೆಅಧಿಕಾರಿ ವಿ.ಎಂ.ಮಹೇಶ್ ಹಾಗೂ ಎಡಿಎಲ್ ಆರ್ ಸಚಿನ್‌ಖಾಸಗಿವ್ಯಕ್ತಿಗಳೊಂದಿಗೆಶಾಮೀಲಾಗಿ ನಕಲಿ ದಾಖಲಾತಿ ಸೃಷ್ಟಿಸಿ ಸರ್ಕಾರಕ್ಕೆ ಸುಳ್ಳು ಮಾಹಿತಿ ನೀಡಿದ್ದಾರೆ. ಅವರೆಲ್ಲರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು ಎಂದರು.

ತಾಲೂಕಿನಕಸಬಾ-1ಹೋಬಳಿಹಳ್ಳಿಮಾಳ ದಾಖ್ಲೆ ತಿಬ್ಬೇಗೌಡನದೊಡ್ಡಿ ಗ್ರಾಮದ ಸರ್ವೆ ನಂ.178-8 ರಲ್ಲಿ ಖರಾಬು 0.03 ಗುಂಟೆ ಸೇರಿ ಒಟ್ಟು 0.25 ಗುಂಟೆ ಜಮೀನು ಪಿತ್ರಾರ್ಜಿತವಾಗಿ ಬಂದ ಸ್ವತ್ತಾಗಿದೆ. ನಮ್ಮ ತಾತ ತಿಬ್ಬೇಗೌಡರ ಜೀವಿತ ಕಾಲದಲ್ಲಿ 1934ರ ಜುಲೈ 2ರಂದು ನೋಂದಣಿ ಕ್ರಯ ಪತ್ರದ ಸಂಖ್ಯೆ 12/34-35 ರ ಮೂಲಕ ಮೆರವೇಗೌಡ ಬಿನ್ ತಿಬ್ಬೇಗೌಡ ಅವರಿಂದ ನೋಂದಣಿ ಕ್ರಯ ಪತ್ರದ ಮೂಲಕ ಕ್ರಯಕ್ಕೆ ಸ್ವಾಧೀನಾನುಭವದಲ್ಲಿದ್ದು, ನಮ್ಮ ಕುಟುಂಬವೇ ವ್ಯವಸಾಯ ಮಾಡಿಕೊಂಡು ಬರುತ್ತಿದೆ ಎಂದರು.

ಜಮೀನು ಮೆರವೇಗೌಡ ಬಿನ್ ತಿಬ್ಬೇಗೌಡರು 1934ರ ಜುಲೈ 29ರಲ್ಲಿ ನೋಂದಣಿ ಕ್ರಯ ಪತ್ರ ಸಂಖ್ಯೆ 181/1934ರಲ್ಲಿ ಹೊನ್ನಕಂಬ, ಚಿಕ್ಕ ಹೊನ್ನಕಂಬ ಅಲಿಯಾಸ್ ಗೋವಿಂದ ಹರಿ, ಚಿಕ್ಕ ಅವರಿಂದ ಕ್ರಯಕ್ಕೆ ಪಡೆದಸ್ವತ್ತಾಗಿದೆ. ಈಗ ಅವರ ಮೊಮ್ಮಗನಾದ ನಾರಾಯಣ, ಆತನ ಪತ್ನಿ ಪದ್ಮಾ ಎಂಬುವರು ಕಂದಾಯಅಧಿಕಾರಿಗಳೊಂದಿಗೆಶಾಮೀಲಾಗಿ ನಕಲಿ ದಾಖಲೆಗಳನ್ನು ಸೃಷ್ಟಿಸಿ ಜಮೀನು ಲಪಟಾಯಿಸಲು ಮುಂದಾಗಿದ್ದಾರೆ ಎಂದರು.

ಜಮೀನಿನ ಮೇಲೆ ಹಕ್ಕು ಬಾಧ್ಯತೆ ಇಲ್ಲದಿದ್ದರೂ ನಾರಾಯಣ ಮತ್ತು ಪದ್ಮಾಗ್ರಾಮ ಲೆಕ್ಕಾಧಿಕಾರಿ ಮತ್ತು ರಾಜಸ್ವ ನಿರೀಕ್ಷಕರ ಜೊತೆ ಶಾಮೀಲಾಗಿ ಸುಳ್ಳು ಪಹಣಿ ಸೃಷ್ಟಿಸಿದ್ದಾರೆ. ಅದರ ಆಧಾರದ ಮೇಲೆ ಸಂಬಂಧಪಟ್ಟ ತಾಲೂಕು ಸರ್ವೆ ಅಧಿಕಾರಿಗಳಿಗೆ ಹದ್ದುಬಸ್ತು ಮಾಡಿಕೊಡುವಂತೆ ಅರ್ಜಿ ಸಲ್ಲಿಸಿದ್ದಾರೆ. ಈ ವಿಚಾರ ತಿಳಿದು ನಮ್ಮ ಕುಟುಂಬ ತಕರಾರು ಅರ್ಜಿ ಸಲ್ಲಿಸಿದೆ. ಅಲ್ಲದೆ, ಖಾತಾ ವರ್ಗಾವಣೆ ಮಾಡಿಸಿ ಕೊಂಡು ಜಮೀನನ್ನು ಕಾನೂನು ಬಾಹಿರವಾಗಿ ಅಕ್ರಮವಾಗಿ ಮಾರಾಟ ಮಾಡಲೂ ಪ್ರಯತ್ನಿಸಿದ ಹಿನ್ನೆಲೆಯಲ್ಲಿ ರಾಮನಗರದ ಹಿರಿಯ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಶಾಶ್ವತ ತಡೆಯಾಜ್ಞೆ ಹಾಗೂ ಇನ್ನಿತರ ಪರಿಹಾರ ಕೋರಿ ದಾವೆ ಹೂಡಿರುವುದಾಗಿ ಸುರೇಂದ್ರ ಹೇಳಿದರು.

ನಮ್ಮ ಜಮೀನಿನಲ್ಲಿ ಸೀಮೆ ಹುಲ್ಲುಕಡ್ಡಿ ನೆಡುತ್ತಿರುವಾಗ ಅಕ್ರಮವಾಗಿ ಪ್ರವೇಶಿಸಿದ ನಾರಾಯಣ ಮತ್ತು ಪದ್ಮಾ ಅವಾಚ್ಯ ಶಬ್ಧಗಳಿಂದ ನಿಂದಿಸಿದರಲ್ಲಗೆ, ಪ್ರಾಣ ಬೆದರಿಕೆ ಹಾಕಿದ್ದಾರೆ. ಈ ಬಗ್ಗೆ ರಾಮನಗರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದರೂ ಸ್ವೀಕರಿಸುತ್ತಿಲ್ಲ. ಕಂದಾಯ ಮತ್ತು ಪೊಲೀಸ್ ಇಲಾಖೆ ಅಧಿಕಾರಿಗಳೆಲ್ಲರು ಈ ಅಕ್ರಮದಲ್ಲಿ ಭಾಗಿಯಾಗಿರುವ ಶಂಕೆಯಿದೆ ಎಂದರು.

ಪಿತ್ರಾರ್ಜಿತ ಜಮೀನನ್ನು ಲಪಟಾಯಿಸಲು ಹುನ್ನಾರ ನಡೆಸಿ ಅಕ್ರಮದಲ್ಲಿ ಭಾಗಿಯಾಗಿರುವ ನಾರಾಯಣ, ಕಂದಾಯ ಇಲಾಖೆ ಹಾಗೂ ಪೊಲೀಸ್ ಇಲಾಖೆ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮ ಜರುಗಿಸಿ ನಮ್ಮ ಕುಟುಂಬಕ್ಕೆ ರಕ್ಷಣೆ ಒದಗಿಸಬೇಕೆಂದು ಸುರೇಂದ್ರ ಒತ್ತಾಯಿಸಿದರು.

ಈ ವೇಳೆ ಅರುಣ್ ಕುಮಾರ್, ಉಮಾ, ಶಿವಮ್ಮ, ಹರ್ಷವರ್ಧನ್ ಹಾಜರಿದ್ದರು.

ರಾಜ್ಯದಲ್ಲಿ 2028ಕ್ಕೆ ಬಿಜೆಪಿ ಅಧಿಕಾರ ಖಚಿತ

3 ರಾಜ್ಯಗಳಲ್ಲಿ ಬಿಜೆಪಿ ಜಯಬೇರಿ ಸಾಧಿಸಿದ್ದಕ್ಕೆ ಪಟಾಕಿ ಸಿಡಿಸಿ ಸಿಹಿ ವಿತರಿಸಿ ಸಂಭ್ರಮ

• **ಕನ್ನಡಪ್ರಭ ವಾರ್ತೆ** ದೇವನಹಳ್ಳಿ

ಪಂಚರಾಜ್ಯ ಚುನಾವಣೆಗಳ ಫಲಿತಾಂಶದಲ್ಲಿ 3 ರಾಜ್ಯಗಳಲ್ಲಿ ಬಿಜೆಪಿ ಜಯಬೇರಿ ಸಾಧಿಸಿದೆ. ಅದೇ ರೀತಿ 2028ಕ್ಕೆ ಕರ್ನಾಟಕದಲ್ಲೂ ಬಿಜೆಪಿ ಸರಕಾರ ಅಧಿಕಾರಕ್ಕೆ ಬರುವುದು ಶತಸಿದ್ಧ ಎಂದು ಬಿಜೆಪಿ ತಾಲೂಕು ಅಧ್ಯಕ್ಷ ಎಲ್.ಎನ್.ಅಂಬರೀಶ್ ಗೌಡ ತಿಳಿಸಿದರು.

ಪಟ್ಟಣದ ಬೈಪಾಸ್‌ನಲ್ಲಿ 3 ರಾಜ್ಯಗಳಲ್ಲಿ ಬಿಜೆಪಿ ಜಯಬೇರಿ ಸಾಧಿಸಿದ ಹಿನ್ನೆಲೆಯಲ್ಲಿ ಪಟಾಕಿ ಸಿಡಿಸಿ ಸಿಹಿಹಂಚಿ ಸಂಭ್ರಮಾಚರಿಸಿದ ವೇಳೆ ಮಾತನಾಡಿದ ಅವರು, ದೇವನಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ 2028ಕ್ಕೆ ಬಿಜೆಪಿ ಅಭ್ಯರ್ಥಿಯನ್ನು ಗೆಲ್ಲಿಸಿ ವಿಧಾನಸಭೆಗೆ ಕಳುಹಿಸಲಿದ್ದೇವೆ. ಮುಖಂಡರೆಲ್ಲಾ ಒಗ್ಗೂಡಿ ಪಕ್ಷವನ್ನು ಬಲವಾಗಿ ಕಟ್ಟುತ್ತಿದ್ದೇವೆ. ಪಂಚ ರಾಜ್ಯಗಳ ಫಲಿತಾಂಶದ ಬಳಿಕ ಕಾರ್ಯಕರ್ತರಲ್ಲಿ ಮತ್ತಷ್ಟು ಉಮ್ಮಸ್ಸು ಬಂದಿದೆ ಎಂದು ಹೇಳಿದರು.

ರಾಜ್ಯದೆಲ್ಲೆಡೆ ನಡೆದ ಪ್ರಶಿಕ್ಷಣ ವರ್ಗದಲ್ಲಿ ದೇವನ ಹಳ್ಳಿ ರಾಜ್ಯದಲ್ಲಿ 2ನೇ ಸ್ಥಾನದಲ್ಲಿದೆ. ಸದಸ್ಯರು ಮುಂಬರುವ ಪಂಚಾಯತಿಹಾಗೂಪುರಸಭೆಚುನಾವಣೆಗಳಿಗೆಸಜ್ಜಾಗಬೇಕು. ಮುಂದಿನ ವಾರದಿಂದ ತಾಲೂಕಿನ 296 ಬೂತ್‌ಗಳಿದ್ದು ಪ್ರತಿ ಬೂತ್‌ಗು ಭೇಟಿ ನೀಡಿ ಸಂಘಟನೆ ಮಾಡಿ ಮುಂಬರುವ ಚುನಾವಣೆಗಳಿಗೆಕಾರ್ಯಕರ್ತರನ್ನುಸಜ್ಜುಮಾಡಲಾಗುವುದು.



ಕಾರ್ಯಕರ್ತರು ಕೇಂದ್ರ ಸರ್ಕಾರದ ಜನಪರ ಯೋಜನೆಗಳನ್ನು ಪ್ರತಿಯೊಬ್ಬರಿಗೂ ತಿಳಿಸಬೇಕು ಎಂದರು.

ಮಾಜಿ ಶಾಸಕ ಜಿ.ಚಂದ್ರಣ್ಣ, ಜಿಲ್ಲಾಧ್ಯಕ್ಷ ರಾಮಕೃಷ್ಣ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ನಾಗವೇಣಿ, ಬಯಪ ಮಾಜಿ ಅಧ್ಯಕ್ಷ ಅಶ್ವಥ್‌ನಾರಾಯಣ್, ಮುಖಂಡರಾದ ದೇಸುನಾಗ 'ರಾಜ್, ಬುಳ್ಳಳ್ಳಿ ರಾಜಪ್ಪ, ಬಿ.ಕೆ.ನಾರಾಯಣಸ್ವಾಮಿ, ಪ್ರಭು, ತಮ್ಮಯ್ಯ, ಅನಿಲ್, ಕದಿರಪ್ಪ, ಅಮರ್‌ನಾರಾಯಣ್, ವೆಂಕಟೇಶ್, ತಾಯಮ್ಮ, ಪ್ರೇಮ, ಪ್ರಭಾಕರ್‌ಸೇರಿದಂತೆ ಅನೇಕ ಮುಖಂಡರು ಸೇರಿ ಮಹಿಳಾ ಕಾರ್ಯಕರ್ತರು ಇದ್ದರು.

ಜನನ ಮರಣ ನೋಂದಣಿ ಶೇ.100 ಸಾಧಿಸಿ


ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಚಂದ್ರಯ್ಯ ಅಧಿಕಾರಿಗಳಿಗೆ ಸೂಚನೆ

• **ಕನ್ನಡಪ್ರಭ ವಾರ್ತೆ** ರಾಮನಗರ

ಜಿಲ್ಲೆಯಲ್ಲಿ ಜನನ-ಮರಣ ನೋಂದಣಿಯನ್ನು ಶೇ.100ರಷ್ಟು ಸಾಧಿಸಲು ಸಂಬಂಧಿಸಿದ ಇಲಾಖೆ ಅಧಿಕಾರಿಗಳು ಅಗತ್ಯ ಕ್ರಮ ವಹಿಸಬೇಕು ಎಂದು ಅಪರ ಜಿಲ್ಲಾಧಿಕಾರಿ ಆರ್.ಚಂದ್ರಯ್ಯ ಸೂಚನೆ ನೀಡಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜನನ ಮರಣ ನೋಂದಣಿ ಕುರಿತು ಆಯೋಜಿಸಿದ್ದ ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಜನನ, ಮರಣ ಘಟನೆಗಳನ್ನು ಘಟಿಸಿದ 21 ದಿನಗಳೊಳಗಾಗಿ ವಿಳಂಬಕ್ಕೆ ಆಸ್ಪದವಿಲ್ಲದಂತೆ ನೋಂದಾಯಿಸಿಕೊಳ್ಳಲು ಪಟ್ಟಣ ಹಾಗೂ ಗ್ರಾಮೀಣ ಪ್ರದೇಶದ ಸಾರ್ವಜನಿಕರಲ್ಲಿ ಅರಿವು ಮೂಡಿಸಬೇಕು ಎಂದು ತಾಕೀತು ಮಾಡಿದರು.

ಜಿಲ್ಲೆಯಲ್ಲಿ 2024ರ ಸಾಲಿನಲ್ಲಿ 9,493 ಜನನ ಘಟನೆಗಳು 10,486 ಮರಣ ಘಟನೆಗಳು 2025 ಸಾಲಿನಲ್ಲಿ 10,207 ಜನನ ಘಟನೆಗಳು, 10,514 ಮರಣ ಘಟನೆಗಳು ಹಾಗೂ 2026ರ ಜನವರಿಯಿಂದ ಏಪ್ರಿಲ್ ಮಾಹೆಯವರೆಗೆ 3,153 ಜನನ ಘಟನೆಗಳು, 3,393 ಮರಣ ಘಟನೆಗಳಾಗಿವೆ ಎಂದು ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ ಸುನೀಲ್ ಕುಮಾರ್ ಮಾಹಿತಿ ನೀಡಿದರು.



ಎಡೀಸಿ ಚಂದ್ರಯ್ಯ ಅಧ್ಯಕ್ಷತೆಯಲ್ಲಿ ಜನನ ಮರಣ ನೋಂದಣಿ ಸಮನ್ವಯ ಸಮಿತಿ ಸಭೆ ನಡೆಯಿತು.

ಜಿಲ್ಲೆಯಲ್ಲಿ 2025ನೇ ಸಾಲಿನಲ್ಲಿ 1,722 ಹಾಗೂ 2026 ಜನವರಿಯಿಂದ ಮಾರ್ಚ್ ವರೆಗೆ 312 ಜನನ ಘಟನೆಗಳು ತಡವಾಗಿ ನೋಂದಣಿಯಾಗಿದೆ. 2025ನೇ ಸಾಲಿನಲ್ಲಿ 3,378 ಹಾಗೂ 2026 ಜನವರಿಯಿಂದ ಮಾರ್ಚ್ ವರೆಗೂ 674 ಮರಣ ಘಟನೆಗಳು ತಡವಾಗಿ ನೋಂದಣಿ ಆಗಿವೆ. ಜನನ-ಮರಣ ಘಟನೆಗಳು ತಡವಾಗಿ ನೋಂದಣಿಯಾಗದಂತೆ ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳು, ಆರೋಗ್ಯ ಇಲಾಖೆ ಸಿಬ್ಬಂದಿ, ಗ್ರಾಮ ಲೆಕ್ಕಾಧಿಕಾರಿಗಳು, ಸಾಂಖಿಕ ನಿರೀಕ್ಷಕರು ಪರಸ್ಪರ ಸಮನ್ವಯದೊಂದಿಗೆ ಕಾರ್ಯ ನಿರ್ವಹಿಸಬೇಕು ಎಂದು ಅಪರ ಜಿಲ್ಲಾಧಿಕಾರಿಗಳು ಸೂಚಿಸಿದರು.

ಸರ್ಕಾರಿ ಆಸ್ಪತ್ರೆಗಳು/ಖಾಸಗಿ ಆಸ್ಪತ್ರೆಗಳ ವೈದ್ಯಾಧಿಕಾರಿಗಳು ತಮ್ಮ ಆಸ್ಪತ್ರೆಗಳಲ್ಲಿ ಘಟಿಸುವ ಜನನ, ಮರಣ ಘಟನೆಗಳನ್ನು ಕಡ್ಡಾಯವಾಗಿ ನೋಂದಾಯಿಸಿಕೊಳ್ಳಲು ಅಗತ್ಯ ಕ್ರಮವಹಿಸಬೇಕು. ಈ ಸಂದರ್ಭದಲ್ಲಿ ಯಾವುದೇ ಲೋಪ ದೋಷಗಳಿಗೆ ಅವಕಾಶ ನೀಡದಂತೆ ಎಚ್ಚರಿಕೆ ವಹಿಸಬೇಕು, ಜಿಲ್ಲೆಯ ಎಲ್ಲಾ ತಹಸೀಲ್ದಾರರು ಜನನ-ಮರಣ ಘಟನೆಗಳ ನೋಂದಣಿಯ ತಾಲೂಕು ಮಟ್ಟದ ಸಮನ್ವಯ ಸಮಿತಿ ಸಭೆಗಳನ್ನು ನಿಯಮಿತವಾಗಿ ನಡೆಸುವಂತೆ ಚಂದ್ರಯ್ಯ ಸೂಚನೆ ನೀಡಿದರು.

ಸಭೆಯಲ್ಲಿ ಮಾಗಡಿ ತಾಲೂಕು ಯೋಜನಾಧಿಕಾರಿ ವೆಂಕಟರಾಮು, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಚೇರಿಯ ಸಹಾಯಕ ನಿರ್ದೇಶಕರಾದ ಮಹೇಶ್, ಕಾವ್ಯ ಸಂಬಂಧಿಸಿದ ಅಧಿಕಾರಿಗಳು ಹಾಜರಿದ್ದರು.

ಇಂದು 24 ಗಂಟೆಗಳ ಹ್ಯಾಕಥಾನ್‌ಗೆ ಚಾಲನೆ

ದೊಡ್ಡಬಳ್ಳಾಪುರ: ಇಲ್ಲಿನ ಆರ್.ಎಲ್.ಜಾಲಪ್ಪ ತಾಂತ್ರಿಕ ಮಹಾವಿದ್ಯಾಲಯದ ಸಿಎಸ್‌ಇ-ಕೃತಕ ಬುದ್ಧಿ ಮತ್ತೆ ಮತ್ತು ಯಂತ್ರ ಕಲಿಕೆ(ಎಐಎಂಎಲ್) ವಿಭಾಗದ ವತಿಯಿಂದ 24 ಗಂಟೆಗಳ ಹ್ಯಾಕಥಾನ್ ಕಾರ್ಯಕ್ರಮಕ್ಕೆ ಮೇ 7ರಂದು ಗುರುವಾರ ಬೆಳಗ್ಗೆ 10 ಗಂಟೆಗೆ ಚಾಲನೆ ದೊರೆಯಲಿದೆ. ಹ್ಯಾಕ್‌ವರ್ಸ್ 2ಕೆ26 ಶೀರ್ಷಿಕೆಯಲ್ಲಿ ಹಮ್ಮಿಕೊಳ್ಳಲಾಗಿರುವ ಈ ಹ್ಯಾಕಥಾನ್‌ನಲ್ಲಿ ರಾಜ್ಯದ ವಿವಿಧ ಜಿಲ್ಲೆಗಳ ಹಲವು ಕಾಲೇಜು ಗಳ ವಿದ್ಯಾರ್ಥಿಗಳು ಪಾಲ್ಗೊಳ್ಳಲಿದ್ದಾರೆ. ತಲಾ 4 ವಿದ್ಯಾರ್ಥಿಗಳನ್ನು ಒಳಗೊಂಡ 55ಕ್ಕೂ ಹೆಚ್ಚು ತಂಡಗಳು ನೋಂದಣಿ ಮಾಡಿಕೊಂಡಿವೆ. ಡೀ-ಕೋಡಿಂಗ್ ಕ್ಲಬ್‌ಉತ್ಪನ್ನ ಮತ್ತು ತಂತ್ರಜ್ಞಾನ ಮುಖ್ಯಾಧಿಕಾರಿ ಅಭಿಷೇಕ್ ತ್ರಿಪಾಠಿ ಪಾಲ್ಗೊಳ್ಳಲಿದ್ದಾರೆ. ಕಾಲೇಜು ಆಡಳಿತ ಮಂಡಲಿ ಪ್ರತಿನಿಧಿಗಳು, ಪ್ರಾಂಶುಪಾಲರು, ಬೋಧಕವರ್ಗ ಭಾಗವಹಿಸಲಿದ್ದಾರೆ ಎಂದು ಡಾ.ಮಂಜುನಾಥ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಿಎಸ್‌ವೈ ಅಭಿಮಾನೋತ್ಸವದಲ್ಲಿ ಹೆಚ್ಚು ಕಾರ್ಯಕರ್ತರು ಪಾಲ್ಗೊಳ್ಳಿ

ತಾಲೂಕಿಂದ 5 ಸಾವಿರಕ್ಕೂ ಹೆಚ್ಚು ಕಾರ್ಯಕರ್ತರು ಭಾಗವಹಿಸುವ ನಿರೀಕ್ಷೆ



• **ಕನ್ನಡಪ್ರಭ ವಾರ್ತೆ** ನೆಲಮಂಗಲ

ಮೇ 9ರಂದು ಚಿತ್ರದುರ್ಗದಲ್ಲಿ ನಡೆಯುವ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ರಾಜಕೀಯ ಪ್ರವೇಶಿಸಿ 50 ವರ್ಷಗಳ ಪೂರೈಸಿರುವ ಹಿನ್ನೆಲೆಯಲ್ಲಿ ಆಯೋಜಿಸಿರುವ ಅಭಿಮಾನೋತ್ಸವ ಕಾರ್ಯಕ್ರಮಕ್ಕೆ ಕ್ಷೇತ್ರದಿಂದ ಸಾವಿರಾರು ಸಂಖ್ಯೆಯ ಕಾರ್ಯಕರ್ತರು ಭಾಗವಹಿಸಲು ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ಬಿಜೆಪಿ ತಾಲೂಕು ಅಧ್ಯಕ್ಷ ಜಗದೀಶ್ ಚೌಧರಿ ತಿಳಿಸಿದರು.

ನಗರದ ಆರಿಶಿನಕುಂಟೆ ಬಳಿ ಬಿಜೆಪಿ ಆಯೋಜಿಸಿದ್ದ ಕಾರ್ಯಕರ್ತರು-ಮುಖಂಡರಸಭೆಯಲ್ಲಿಮಾತನಾಡಿದ ಅವರು, ರಾಜ್ಯದಲ್ಲಿ ಯಡಿಯೂರಪ್ಪ ಗರಡಿಯಲ್ಲಿ ಅನೇಕ ನಾಯಕರು ಬೆಳೆದಿದ್ದಾರೆ. ರಾಜ್ಯದಲ್ಲಿ ಬಿಜೆಪಿ ಪಕ್ಷ ಕಟ್ಟವಲ್ಲಿ ಮುಂಚೂಣಿ ನಾಯಕರಾಗಿದ್ದರು. 2007ರ ವಿಧಾನಸಭಾ ಚುನಾವಣೆಯಲ್ಲಿ ಪಕ್ಷ ಅಧಿಕಾರಕ್ಕೆ ತರುವಲ್ಲಿ ಶ್ರಮಿಸಿ ಮುಖ್ಯಮಂತ್ರಿಯಾಗಿ ಜನಪರ ಯೋಜನೆಗಳ ಕೈಗೊಂಡಿದ್ದಾರೆಂದರು.

ಮೇ 9ರಂದು ಚಿತ್ರದುರ್ಗದಲ್ಲಿ ನಡೆಯುವ ಕಾರ್ಯಕ್ರಮಕ್ಕೆ ತಾಲೂಕಿನಿಂದ 5 ಸಾವಿರಕ್ಕೂ ಹೆಚ್ಚು ಕಾರ್ಯಕರ್ತರು ಭಾಗವಹಿಸಲಿದ್ದು, 50 ಬಸ್‌ಗಳ ವ್ಯವಸ್ಥೆ ಮಾಡಲಾಗಿದೆ. ಜತೆಗೆ ನೂರಾರು ಮುಖಂಡರು ಸ್ವಯಂಪ್ರೇರಿತರಾಗಿ ಕಾರು ಹಾಗೂ ವಾಹನಗಳ ಮೂಲಕ ಆಗಮಿಸಲಿದ್ದಾರೆ ಎಂದು ಬಿಜೆಪಿ ತಾಲೂಕು ಅಧ್ಯಕ್ಷ ಜಗದೀಶ್ ಚೌಧರಿ ತಿಳಿಸಿದರು.

ಬಿಜೆಪಿ ಮುಖಂಡ ಸಪ್ತಗಿರಿಶಂಕರ್ ನಾಯಕ್ ಮಾತನಾಡಿ, ರಾಜ್ಯದಲ್ಲಿ ಬಿಜೆಪಿ ಪಕ್ಷವನ್ನು ತಳಮಟ್ಟದಿಂದ ಸಂಘಟಿಸಿ ಪಕ್ಷದ ಬೆಳವಣಿಗೆಗೆ ಅವರ ಕೊಡುಗೆ ದೊಡ್ಡದಿದೆ. ಬಿಜೆಪಿ ಸರ್ಕಾರ ರಾಜ್ಯದಲ್ಲಿ ಅಧಿಕಾರಕ್ಕೆ ಬರಲು ಹಗಲಿರುಳು ಶ್ರಮಿಸಿದವರು ಎಂದರು. ಮಾಜಿ ಶಾಸಕ ನಾಗರಾಜು, ನೆ.ಯೋ.ಪ್ರಾಧಿಕಾರ ಮಾಜಿ ಅಧ್ಯಕ್ಷ ಎಸ್.ಮಲ್ಲಯ್ಯ, ರೈತ ಮೋರ್ಚಾ ಜಿಲ್ಲಾಧ್ಯಕ್ಷ ಬ್ಯಂಗೇಶ್, ತಾಲೂಕು ಉಪಾಧ್ಯಕ್ಷ ಎನ್ ರಾಜಶೇಖರ್, ಪ್ರಧಾನ ಕಾರ್ಯದರ್ಶಿ ಸತೀಶ್, ರಂಗನಾಥಬಾಬು, ಮಂಜುಳಾ ಮತ್ತಿತರರಿದ್ದರು.

ರಾಷ್ಟ್ರೀಯ ಹೆದ್ದಾರೀಲಿ ಸರಣಿ ಅಪಘಾತ

ಕೆಎಸ್‌ಆರ್‌ಟಿಸಿ ಬಸ್, ಲಾರಿ, ಟ್ಯಾಂಕರ್, 3 ಕಾರು ಅಪಘಾತ

• **ಕನ್ನಡಪ್ರಭ ವಾರ್ತೆ** ದಾಬಸ್‌ಪೇಟೆ

ಕೆಎಸ್‌ಆರ್‌ಟಿಸಿ ಬಸ್, ಲಾರಿ, ಕ್ಯಾಂಟರ್, 3 ಕಾರು, ಬೈಕ್‌ಗಳ ನಡುವೆ ಸರಣಿ ಅಪಘಾತ ಸಂಭವಿಸಿರುವ ಘಟನೆ ಸೋಂಪುರ ಹೋಬಳಿ ಅಂಚೆಮನೆ ಗ್ರಾಮದ ರಾಷ್ಟ್ರೀಯ ಹೆದ್ದಾರಿ-48ರಲ್ಲಿ ತುಮಕೂರು-ಬೆಂಗಳೂರು ರಸ್ತೆಯಲ್ಲಿ ಬುಧವಾರ ಸಂಜೆ ನಡೆದಿದೆ.

ಬೆಂಗಳೂರು ಕಡೆಯಿಂದ ತುಮಕೂರು ಕಡೆಗೆ ಹೋಗುತ್ತಿದ್ದ ಕಾರು ಟ್ರಾಫಿಕ್ ಜಾಮ್‌ನಿಂದ ರಸ್ತೆ ಮಧ್ಯೆ ನಿಧಾನವಾಗಿ ಚಲಿಸುತ್ತಿದ್ದ ವೇಳೆ ಹಿಂಬದಿಯಿಂದ ವೇಗವಾಗಿ ಬಂದ ಕೆಎಸ್‌ಆರ್‌ಟಿಸಿ ಬಸ್ ಕಾರಿಗೆಡಿಕ್ಕಿಹೊಡೆದಿದೆ. ಆಗ ಮುಂದಿದ್ದ ಇನ್ನೆರಡು ಕಾರುಗಳಿಗೆ ಡಿಕ್ಕಿ ಹೊಡೆದೆದೆ. ಎಕ್ಸಯೂವಿ ಕಾರು ಸಂಪೂರ್ಣ ಜಖಂಗೊಂಡಿದೆ.

ಕೆಎಸ್‌ಆರ್‌ಟಿಸಿಬಸ್‌ಗೆ ಟ್ರಕ್ ಲಾರಿ ಡಿಕ್ಕಿ ಹೊಡೆದಿದ್ದು, ಸರಣಿ ಅಪಘಾತ ತಪ್ಪಿಸಲು ಹೋದಪೈಂಟ್‌ತುಂಬಿಕೊಂಡುಹೋಗುತ್ತಿದ್ದ ಕ್ಯಾಂಟರ್‌ನಿಯಂತ್ರಣ ತಪ್ಪಿ ಟ್ರಕ್ ಲಾರಿಗೆ ಡಿಕ್ಕಿ ಹೊಡೆದ ಪರಿಣಾಮ ಹಳ್ಳಕ್ಕೆ ಪಲ್ಟಿಯಾಗಿದೆ. ಪೈಂಟ್ ಡಬ್ಬಗಳೆಲ್ಲಾ ರಸ್ತೆಯಲ್ಲಿ ಚೆಲ್ಲಾಪಿಲ್ಲಿಯಾಗಿ ಬಿದ್ದಿದೆ. ಅದೇ ವೇಳೆ ಕ್ಯಾಂಟರ್‌ಪಕ್ಕ ಬರು ತ್ತಿದ್ದ ಬೈಕ್ ಕ್ಯಾಂಟರ್ ಹಿಂಬದಿಗೆ ಸಿಲುಕಿ ಕ್ಯಾಂಟರ್ ಸಮೇತ ಹಳ್ಳಕ್ಕೆ ಬಿದ್ದಿದ್ದು ಅದೃಷ್ಟ ವಶಾತ್ ಬೈಕ್ ಸವಾರ ಪ್ರಾಣಾಪಾಯದಿಂದ ಪಾರಾಗಿದ್ದಾನೆ.



ಅಪಘಾತದಲ್ಲಿ ಟ್ರಕ್ ಲಾರಿ ಹಾಗೂ ಕ್ಯಾಂಟರ್‌ಚಾಲಕನಿಗೆ ಕಾಲು ಮುರಿದಿದ್ದು, ಬಸ್ ಹಾಗೂ ಕಾರಿನಲ್ಲಿದ್ದವರಿಗೆ ಸಣ್ಣಪುಟ್ಟ ಗಾಯಗಳಾಗಿ ಸ್ಥಳೀಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಸರಣಿ ಅಪಘಾತದ ಹಿನ್ನೆಲೆಯಲ್ಲಿ ರಾಷ್ಟ್ರೀಯ ಹೆದ್ದಾರಿಯ ಎರಡೂ ಬದಿಗಳಲ್ಲಿ ಏಳೆಂಟು ಕಿಮೀ ಟ್ರಾಫಿಕ್ ಜಾಮ್ ಉಂಟಾಗಿ ವಾಹನ ಸವಾರರು ಪರದಾಡಿದರು.

ಅಪಘಾತದ ಸ್ಥಳದಲ್ಲಿ ಮಧ್ಯೆ ರಸ್ತೆಯಲ್ಲಿ ನಿಂತಿದ್ದ ಸರಣಿ ಅಪಘಾತದ ವಾಹನಗಳನ್ನು ರಸ್ತೆಯಿಂದ ಹೊರ ಹಾಕಲು ನೆಲಮಂಗಲ ಸಂಚಾರ ಪೊಲೀಸರು ಹಾಗೂ ದಾಬಸ್‌ಪೇಟೆ ಪೊಲೀಸ್ ಠಾಣೆಯ 20ಕ್ಕೂ ಹೆಚ್ಚು ಸಿಬ್ಬಂದಿ ಹರಸಾಹಸ ಪಟ್ಟರು. ನೆಲಮಂಗಲ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

BEFORE THE SPECIAL ASSISTANT COMMISSIONER V, DODDABALLAPURA SUB-DIVISION, AT DODDABALLAPURA

R.A.NO. 528/2024

BETWEEN : Sri. Munishamappa and another **...APPELLANTS**

AND : Tahsildhar Doddaballapur Taluk and others **...RESPONDENTS**

TO, 2. Sri. R.A.Narayanaswamy S/o Late Chikka Anjinappa Aged about 76 years
3. Sri. R.A. Channappa S/o Late Chikka Anjinappa Aged about 71 years
4. Sri. Babu S/o Late R.A. Nagarajaiah Aged about 51 years **5. Sri. Shekhar** S/o Late R.A. Nagarajaiah Aged about 48 years All are residing at, Rajaghatta Village, Kasaba Hobli, Dodda ballapura Taluk, Bengaluru Rural District -561203

...RESPONDENTS NO.2 TO 5

Summons / Notice for Service (Under Order 5 Rules 20 of CPC)

Whereas the appellants have preferred the present appeal against the mutation order passed by the 1st respondent vide M.R.No.T16/2020-21 dated. 22.12.2020 in respect of the land bearing Sy.No.162 present Sy.No.162/7 measuring 1 acre 27 guntas, situated at Kanchiganala Village, Tubugere Hobli, Doddaballapura Taluk and whereas the respondent No.2 to 5 are evading to take court summons and by RPAD. Therefore please take notice that you are hereby summoned to appear before this Hon'ble Court in person or by a pleader on **10-6-2026 at about 03.00 P.M.** to answer the same, failing which the petition will be disposed off by placing you exparte.
Given under my hand and seal of the Court this 29th day of April 2026.

By Order of the Court
Sd/- Special Assistant Commissioner V
Doddaballapura Sub Division, Doddaballapura
Advocate for Appellants
P. NARENDRA BABU

IN THE COURT OF THE HON'BLE XXX CITY CIVIL JUDGE AT BENGALURU (CCH-31)

O.S. No. 682/2022

BETWEEN : Sri. MOHANKUMAR SIDDANNA, S/o Late N. Anusuyamma, GS/o Late Narayana Reddy, Aged about 40 years, R/at: 64, Om Shakthi Shiva Nilaya, 13th 'C' Cross, Near Om Shakthi Temple, Kaggadasapura, Bangalore - 560 093. & Others **...PLAINTIFFS**

AND : Sri. N. RAMACHANDRA REDDY & Others ...DEFENDANTS

NOTICE TO PROPOSED DEFENDANT No. 17 ON IA 9 U/o. 5 RULE 20 OF CPC

17. Sri. L. KESHAVA, S/o Y.M. Lakshman Reddy, Aged about 50 years, R/at: Yadavanahalli, Attibele Hobli, Anekal Taluk, Bangalore-562107.

WHEREAS, the plaintiffs have filed the above suit for seeking the relief of Partition & Separate Possession against the defendants in respect of suit schedule Property and the Proposed Defendant No. **17** are hereby informing to attend the case which is pending before the City Civil Judge, at Bengaluru **on 17th day of June 2026 at 11.00 A.M.** either person or by pleader to answer the same, failing which the Defendant No.**17** will be placed ex-prate.
Give under my hand and seal of the Court on 24.04.2026.

By Order of the Court, Senior Sheristedar, City Civil Court, Bengaluru.
S. JAYAPRAKASH NARAYAN, Advocate
O/at No. 314, 1st Floor, Prabath Complex, K.G. Road, Bangalore-560009.

ಗೌರವಾನ್ವಿತ ಸಾಲಗಳ ವಸೂಲಾತಿಗಾಗಿ ರಿಕವರಿ ಟ್ರಿಬ್ಯೂನಲ್-1

ಬಿ.ಎಸ್.ಎನ್.ಎಲ್. ಕಟ್ಟಡ, 4ನೇ ಮಹಡಿ, ಟೆಲಿಫೋನ್ ಹೌಸ್, ರಾಜಭವನ, ಬೆಂಗಳೂರು-560001.

ಒ.ಎ. ನಂ. 308/2025
ಖಾತೆ ಸಂಖ್ಯೆ : 922030044217231

ನಡುವೆ :
ಮೆ. ಎಕ್ಸಿಸ್ ಬ್ಯಾಂಕ್ ಲಿಮಿಟೆಡ್.,
ನೊಂದಾಯಿತ ಕಛೇರಿ ವಿಳಾಸ : "ತ್ರಿಶೂಲ್", ಸಮರ್ಥೇಶ್ವರ ದೇವಸ್ಥಾನದ ಎದುರು, ಹೊಸ ಲಾ ಗಾರ್ಡನ್, ಎಲೀಸ್ ಬ್ರಿಡ್ಜ್, ಅಹಮದಾಬಾದ್-380006, ಜೊತೆಗೆ ಪ್ಲಾಟ್ ಸಂಖ್ಯೆ 41. ಶೇಷಾದ್ರಿ ರಸ್ತೆ, ಆನಂದ್ ರಾವ್ ವೃತ್ತ, ಬೆಂಗಳೂರು-560 009,
ಇಮೇಲ್: rabuntors.collections@axabank.com
...ಅರ್ಜಿದಾರರು

ಮತ್ತು

1. **ಮೆ॥ ಎಂ ಎ ಆರ್ ಸಿಲ್ಕ್ ವೇಸ್ಟ್ ಟ್ರೇಡರ್ಸ್**
ವಿಳಾಸ ವಾರ್ಡ್ ನಂ.18, ಮಹಬೂಬ್ ನಗರ, ಆಂಜನೇಯ ದೇವಸ್ಥಾನ ಕ್ರಾಸ್, ರಾಮನಗರ, ರಾಮನಗರ, ಕರ್ನಾಟಕ-562159
2. **ಶ್ರೀ ಮೊಹಮ್ಮದ್ ಮುಶೀರ್**
ಬಿನ್ ಮುಷ್ಟೈಕ್ ಅಹ್ಮದ್, ನಂ.404, 2ಎ ವಾರ್ಡ್ ನಂ18, 7ನೇ ಕ್ರಾಸ್, ರಾಮನಗರ, ಕರ್ನಾಟಕ-562159.
...ಪ್ರತಿವಾದಿಗಳು

1993ರ ನಿಯಮ 23 (Viii) ರ ಅಡಿಯಲ್ಲಿ ಸಾಲ ವಸೂಲಾತಿ ನ್ಯಾಯಮಂಡಳಿ (ಕಾರ್ಯ ವಿಧಾನ) ದಂತೆ ನೋಟಿಸ್ ನೀಡಲಾಗಿದೆ.

ಅದಾಗಿ ಅರ್ಜಿದಾರರು ಬ್ಯಾಂಕುಗಳಿಗೆ ಮತ್ತು ಹಣಕಾಸು ಸಂಸ್ಥೆ ಕಾಯ್ದೆ 1993 ರಲ್ಲಿ ಪರಿಚ್ಛೇದ 19ರ ಅಡಿಯಲ್ಲಿ ಅನ್ವಯಿಸುವಂತೆ ನಿಮ್ಮಿಂದ ಹಾಗೂ ಇತರರಿಂದ ಬ್ಯಾಂಕಿಗೆ ಬರಬೇಕಾದ ಬಾಕಿ **ರೂ. 30,57,604.16/- (ರೂಪಾಯಿ ಮೂವತ್ತು ಲಕ್ಷದ ಐವತ್ತೇಳು ಸಾವಿರದ ಆರುನೂರ ನಾಲ್ಕು ಮತ್ತು ಹದಿನಾರು ಪೈಸೆ ಮಾತ್ರ)** ಜೊತೆಗೆ ಪ್ರಸ್ತುತ ಭವಿಷ್ಯದ ಬಡ್ಡಿ, ಮತ್ತು ಇತರ ಖರ್ಚು ವೆಚ್ಚಗಳು. ಮೇಲಿನ ಮೊಕದ್ದಮೆಯ ವಿಚಾರಣೆಯನ್ನು ನಿಮ್ಮ ಉಪಸ್ಥಿತಿಗಾಗಿ **ದಿನಾಂಕ 27.07.2026 ಬೆಳಿಗ್ಗೆ 10.30 ಗಂಟೆಗೆ** ನಡೆಸಲಾಗುವುದು. ಆದಕಾರಣ ತಾವು ಖುದ್ದಾಗಿ ಅಥವಾ ತಮ್ಮ ವಕೀಲರ ಮುಖಾಂತರ ಮೇಲೆ ತಿಳಿಸಿರುವ ಮೇಲ್ಕನವಿ ನ್ಯಾಯಮಂಡಳಿಯ ಮುಂದೆ ಹಾಜರಿರಬೇಕಾಗಿ ಈ ಮೂಲಕ ತಿಳಿಸಲಾಗುವುದು.

ಒಂದು ವೇಳೆ ನೀವು ಗೈರು ಹಾಜರಾದಲ್ಲಿಯೂ ಸಹ ಈ ಅರ್ಜಿಯನ್ನು ವಿಚಾರಣೆಗೆ ಕರೆದು ತೀರ್ಮಾನಿಸಲಾಗುವುದೆಂದು ಸೂಚನೆ ನೀಡಲಾಗಿದೆ.

ದಿನಾಂಕ: 04.05.2026 ರಂದು ನನ್ನ ಸಹಿ ಮತ್ತು ನ್ಯಾಯಮಂಡಳಿಯ ಮೊಹರಿನೊಂದಿಗೆ ನೀಡಲಾಗಿದೆ.

ರಿಜಿಸ್ಟ್ರಾರ್
ಸಾಲ ವಸೂಲಾತಿ ನ್ಯಾಯಮಂಡಳಿ-1
ಬೆಂಗಳೂರು.

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ನಮ್ಮ ಕಕ್ಷಿದಾರರು, ಶಾಂತವೀರಯ್ಯ ಬಿನ್ ಚಿಕ್ಕರಾಮಯ್ಯ, ವಾಸ: ಚಿಕ್ಕೇಗೌಡನದೊಡ್ಡಿ ಗ್ರಾಮ, ಕಸಬಾ ಹೋಬಳಿ, ಹರೀಸಂದ್ರ, ರಾಮನಗರ ತಾಲೂಕು-562128, ಇವರೊಂದಿಗೆ ಖರೀದಿಯ ನಿಯಮಗಳ ಕುರಿತು ಮಾತುಕತೆ ನಡೆಸುತ್ತಿದ್ದಾರೆ.

ಪ್ರಸ್ತಾವಿತ ಖರೀದಿಗೆ ಆಕ್ಷೇಪಣೆ ಸಲ್ಲಿಸುವ ಅಥವಾ ಕೆಳಗೆ ತಿಳಿಸಲಾದ ಷೆಡ್ಯೂಲ್ ಸ್ವತ್ತಿಗೆ ಸಂಬಂದಿಸಿದಂತೆ ಯಾವುದೇ ಹಕ್ಕು, ಶೀರ್ಷಿಕೆ ಅಥವಾ ಆಸಕ್ತಿಯನ್ನು ಹೊಂದಿರುವ ವ್ಯಕ್ತಿ/ಗಳು ಈ ದಿನಾಂಕದಿಂದ 15 ದಿನಗಳ ಒಳಗೆ ಅಂತಹ ಕ್ಲೈಮ್‌ಗೆ ಪೂರಕವಾದ ದಾಖಲೆ ಪುರಾವೆಗಳೊಂದಿಗೆ ಕೆಳಗೆ ಸಹಿ ಮಾಡಿದವರಿಗೆ ಲಿಖಿತವಾಗಿ ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಬಹುದು.

ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ಪ್ರಕರಣ/ಗಳನ್ನು ದಾಖಲಿಸಿರುವ ವ್ಯಕ್ತಿ/ವ್ಯಕ್ತಿಗಳು ಈ ಪ್ರಕಟಣೆಯ ದಿನಾಂಕದಿಂದ 15 ದಿನಗಳ ಒಳಗೆ ಲಿಖಿತ ದಾಖಲೆಗಳ ಪುರಾವೆಗಳೊಂದಿಗೆ ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಲು ತಿಳಿಸಲಾಗಿದೆ. ನಂತರ ಸ್ವೀಕರಿಸಿದ ಯಾವುದೇ ಆಕ್ಷೇಪಣೆಗಳು ನನ್ನ ಕಕ್ಷಿದಾರರ ಮೇಲೆ ಬದ್ಧವಾಗಿರುವುದಿಲ್ಲ ಮತ್ತು ನನ್ನ ಕಕ್ಷಿದಾರರು ಯಾವುದೇ ಹಕ್ಕು/ಆಕ್ಷೇಪಣೆಗಳಿಲ್ಲ ಎಂಬಂತೆ ಷೆಡ್ಯೂಲ್ ಸ್ವತ್ತನ್ನು ಖರೀದಿಸಲು ಮುಂದುವರಿಯುತ್ತಾರೆ

ಷೆಡ್ಯೂಲ್

ರಾಮನಗರ ತಾಲೂಕು, ಕಸಬಾ ಹೋಬಳಿ, ರಾಮನಗರ ತಾಲೂಕಿನ ಹರೀಸಂದ್ರ ಗ್ರಾಮದಲ್ಲಿರುವ ಸರ್ವೆ ನಂ. 129/1, ಖಾತಾ ನಂ.183, 2 ಎಕರೆ 21 ಗುಂಟ ಅಳತೆಯ ಕೃಷಿ ಭೂಮಿ, ಜೊತೆಗೆ 8 ಗುಂಟ ಪೋತ ಕರಬ್, ಸ್ವತ್ತಿಗೆ ಚಕ್ಕುಬಂಧಿ:-
ಪೂರ್ವಕ್ಕೆ : ಸರ್ವೆ ಸಂಖ್ಯೆ 122ರ ಜಮೀನು
ಪಶ್ಚಿಮಕ್ಕೆ : ಕೆಂಪರಾಮಯ್ಯ ಅವರಿಗೆ ಸೇರಿದ ಭೂಮಿ;
ಉತ್ತರಕ್ಕೆ : ದೇವರಾಜು ಅವರಿಗೆ ಸೇರಿದ ಭೂಮಿ;
ದಕ್ಷಿಣಕ್ಕೆ : ಪ್ರಾರ್ಥನಾ ಅವರಿಗೆ ಸೇರಿದ ಭೂಮಿ.

ಡಿ.ಎಚ್.ಮೋಹನ್ ಅಂಡ್ ಅಸೋಸಿಯೇಟ್ಸ್, ವಕೀಲರು,
ನಂ. 831, 'ಜಯ ಶಾಂತಿ ನೆಲೆ',
2ನೇ ಮಹಡಿ, 1ನೇ ಇ ಮುಖ್ಯ ರಸ್ತೆ,
ಗಿರಿನಗರ 2ನೇ ಹಂತ, ಬೆಂಗಳೂರು-560 085.
ದೂ: 26720175, ಮೊಬೈಲ್ : 98454-98591

ಬ್ಯಾಂಕ್ ಆಫ್ ಬರೋಡ ದೊಡ್ಡಬಳ್ಳಾಪುರ, ಮುಖ್ಯ ಶಾಖೆ
ಒಕ್ಕಲಿಗರ ಭವನದ ಎದುರು, ತಾಲೂಕು ಕಛೇರಿ ರಸ್ತೆ, ರೋಜಿಪುರ, ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ-561203.

ಡಿಮಾಂಡ್ ನೋಟೀಸ್

2002ರ ಭದ್ರತಾ ಹಿತಾಸಕ್ತಿ ಜಾರಿ ಮತ್ತು ಹಣಕಾಸು ಆಸ್ತಿಗಳ ಭದ್ರತೆ ಮತ್ತು ಪುನರ್‌ನಿರ್ಮಾಣ ಕಾಯಿದೆಯ 13(2)ರ ಅಡಿಯಲ್ಲಿ ನೋಟೀಸ್

ಆದಾಗ್ಯೂ, (ಈ ಕೆಳಗೆ ನಮೂದಿಸಿದ ಸಾಲಗಾರರು/ ಅಡಮಾನದಾರರು) ಆದ ನಿಮ್ಮ ಕೋರಿಕೆಯ ಮೇರೆಗೆ ಬ್ಯಾಂಕಿನ ಪರವಾಗಿ ನೀವು ಸೃಷ್ಟಿಸಿದ ಭದ್ರತಾ ಹಿತಾಸಕ್ತಿಯೊಂದಿಗಿದ್ದ ವಿವಿಧ ಆಸ್ತಿಗಳ ಆಧಾರದ ಮೇಲೆ **ಬ್ಯಾಂಕ್ ಆಫ್ ಬರೋಡ, ದೊಡ್ಡಬಳ್ಳಾಪುರ ಮುಖ್ಯ ಶಾಖೆ** ಹಣಕಾಸಿನ ನೆರವಿನ ಮೂಲಕ ಕಾಲ ಕಾಲಕ್ಕೆ ವಿವಿಧ ಸಾಲ ಸೌಲಭ್ಯಗಳನ್ನು ನೀಡಿರುತ್ತದೆ. ನೀವು ಬ್ಯಾಂಕಿನ ಪರವಾಗಿ ಭದ್ರತಾ ಹಿತಾಸಕ್ತಿ ಸೃಷ್ಟಿಸುವ ಅಡಮಾನ ಮಾಡಿರುವ ಆಸ್ತಿಗಳನ್ನು ವಿವರಗಳನ್ನು ಕೆಳಗೆ ತಿಳಿಸಲಾಗಿದೆ. ಬ್ಯಾಂಕಿಗೆ ಪಾವತಿಸಬೇಕಾದ ಬಾಕಿ ಹಣವನ್ನು ಪಾವತಿಸಲು ವಿಫಲರಾಗಿದ್ದರಿಂದ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ ಮಾರ್ಗದರ್ಶನಗಳಂತೆ ನಿಮ್ಮ ಖಾತೆಯನ್ನು ನಿಷ್ಕಾರ್ಯ ಆಸ್ತಿ ಎಂಬುದಾಗಿ ವರ್ಗೀಕರಿಸಲಾಗಿದೆ. ಬ್ಯಾಂಕಿಗೆ ಬಾಕಿಯಾಗಿರುವ ಸಾಲದ ವಸೂಲಾತಿಗಾಗಿ ನೋಂದಾಯಿತ ಅಂಚೆಯ ಮೂಲಕ ಕಳಿಸಲಾಗಿದ್ದ ಡಿಮ್ಯಾಂಡ್ ನೋಟಿಸ್ ಅನ್ನು ಅಂಚೆ ಇಲಾಖೆ ಹಿಂತಿರುಗಿಸಿದ್ದರಿಂದ, ಈ ನೋಟಿಸ್ ಅನ್ನು ಪತ್ರಿಕೆ ಪ್ರಕಟಣೆ ಮೂಲಕ ಜಾರಿಗೊಳಿಸಿ ಪ್ರಕಟಿಸಲಾಗಿದೆ.

ಸಾಲಗಾರರ ಹೆಸರು : 1.ಶ್ರೀ ಮೊಹಮ್ಮದ್ ಖಲೀಲ್ ಲೇಟ್ ಮೊಹಮ್ಮದ್ ಇಸ್ಮಾಯಿಲ್‌ರವರ ಮಗ, ಪಳನಜೋಗಿಹಳ್ಳಿ ಗ್ರಾಮ, ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ-561203. **ಜಾಮೀನುದಾರರು:** ಶ್ರೀ ಮೊಹಮ್ಮದ್ ಸಮಿವುಲ್ಲಾ S/o ಲೇಟ್ ಮೊಹಮ್ಮದ್ ಇಸ್ಮಾಯಿಲ್, ಪಳನಜೋಗಿಹಳ್ಳಿ ಗ್ರಾಮ, ದೊಡ್ಡಬಳ್ಳಾಪುರ ಬೆಂಗಳೂರು ಗ್ರಾಮಾಂತರ ಜಿಲ್ಲೆ-561203 **ಎನ್‌ಪಿಎ ದಿನಾಂಕ :21.07.2025**

ಬಾಕಿ ಇರುವ ಮೊತ್ತ: 21.07.2025ರಂದು ಇದ್ದಂತೆ ರೂ.10,61,139.14/-* (ಹತ್ತು ಲಕ್ಷದ ಅರವತ್ತೊಂದು ಸಾವಿರದ ನೂರ ಮೂವತ್ತೊಂಭತ್ತು ರೂ. ಮತ್ತು ಹದಿನಾಲ್ಕು ಪೈಸೆ ಮಾತ್ರ) ಮತ್ತು ಯಾವುದೇ ಬಡ್ಡಿ ಮತ್ತು ಶುಲ್ಕಗಳು ಮತ್ತು ಪಾವತಿ ದಿನಾಂಕದವರೆಗಿನ ವೆಚ್ಚಗಳು.

ಭದ್ರತೆಗಳ ಸಂಕ್ಷಿಪ್ತ ವಿವರಣೆಯೊಂದಿಗೆ ಭದ್ರತಾ ಒಪ್ಪಂದ:

ಈಕ್ವಿಟೆಬಲ್ ಅಡಮಾನಿತ ಭೂಮಿ ಮತ್ತು ಕಟ್ಟಡದ ಹಳೆಯ ನಿವೇಶನ ಸಂ.10, ಹೊಸ ಖಾತಾ ಸಂಖ್ಯೆ 150300300700500330 ಅಳತೆ ಪೂರ್ವದಿಂದ ಪಶ್ಚಿಮಕ್ಕೆ 30 ಅಡಿ, ಉತ್ತರದಿಂದ ದಕ್ಷಿಣಕ್ಕೆ 40ಅಡಿ ಪಾಲನಜೋಗಿಹಳ್ಳಿ ಗ್ರಾಮ, ಕೊಡಿಗೇಹಳ್ಳಿ ಗ್ರಾಮ ಪಂಚಾಯತ್, ಕಸಬಾ ಹೋಬಳಿ, ದೊಡ್ಡಬಳ್ಳಾಪುರ, ಚಕ್ಕುಬಂದಿ: **ಪೂರ್ವಕ್ಕೆ: ಖಾಲಿ ನಿವೇಶನ ಸಂ.27, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ಖಾಲಿ ನಿವೇಶನ ನಂ.11, ದಕ್ಷಿಣಕ್ಕೆ: 20ಅಡಿ ರಸ್ತೆ.**

